**ದಿನಾಂಕ: 11–08–2011 ರಂದು ಬೆಳಿಗ್ಗೆ 10.30 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳ ಕುರಿತು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | | |
|---|---|---|---|---|---|
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಡಿ.ಕನಕರಾಜು | ಉಪ ನಿಯಂತ್ರಕರು(ಹಣಕಾಸು) |
| 2 | ಎನ್.ಶಕುಂತಲ | ಸದಸ್ಯರು | 2 | ಸುರೇಂದ್ರಬಾಬು.ಬಿ. | ಕಾ.ಪಾ.ಅ.(ಯೋಜನೆ–ಯಲಹಂಕ) |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 3 | ಎಂ.ಎಲ್.ರಮೇಶ್ | ಕಾ.ಪಾ.ಅ.(ಯೋಜನೆ–ಬೊಮ್ಮನಹಳ್ಳಿ) |
| 4 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 4 | ಎಲ್.ವೆಂಕಟೇಶ್ | ಕಾ.ಪಾ.ಅ.(ಯೋಜನೆ–ಪಶ್ಚಿಮ) |
| 5 | ನಿರ್ಮಲ | ಸದಸ್ಯರು | 5 | ಸಿ.ಎಂ.ಜಾನ್ | ಕಾ.ಪಾ.ಅ.(ಯೋಜನೆ–ಪೂರ್ವ) |
| 6 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 6 | ಹೊಂಬೇಗೌಡ | ಸ.ಕಾ.ನಿ.ಅ(ಯೋಜನೆ–ದಕ್ಷಿಣ) |
| 7 | ಕೇಶವಮೂರ್ತಿ.ಎಸ್. | ಸದಸ್ಯರು | 7 | ಬಿ.ಎಲ್.ನಾಗರಾಜ್ | ಸ.ಕಾ.ನಿ.ಅ(ಯೋಜನೆ–ದಕ್ಷಿಣ) |
| 8 | ಗಂಗಾಧರ್.ಹೆಚ್.ಎನ್. | ಸದಸ್ಯರು | 8 | ಟಿ.ಕೃಷ್ಣಮೂರ್ತಿ | ಸಹಾಯಕ ಅಭಿಯಂತರರು(ಯೋಜನೆ) |
| | | | 9 | ಸಂಜೀವ್ ಕುಮಾರ್ | ಸಹಾಯಕ ಅಭಿಯಂತರರು(ಯೋಜನೆ) |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರು, ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಯಿತು.

**1. ವಿಷಯ ಸಂಖ್ಯೆ:ತೋ/ಸ್ಥಾ/ಸ/15/11–12, ದಿನಾಂಕ:18–07–2011**

*ವಿಜಿನಾಪುರ ಕೆರೆ (ಕೌದೇನಹಳ್ಳಿ ಸರ್ವೆ ನಂ.85)ಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಸದರಿ ಕೆರೆಯ ಮೋಜಣಿ ಕೈಗೊಂಡು ನಕ್ಷೆ ತಯಾರಿಸಲಾಗಿದ್ದು, ಮೋಜಣಿ ಪ್ರಕಾರ ಕೆರೆಯ ವಿಸ್ತೀರ್ಣ 11 ಎಕರೆ, 20 ಗುಂಟೆ ಇದ್ದು, ಇದರ ಪೈಕಿ 5 ಎಕರೆ, 1 ಗುಂಟೆ ಪ್ರದೇಶವು ಅತಿಕ್ರಮಣವಾಗಿದ್ದು, ಈ ಜಾಗದಲ್ಲಿ ಅನೇಕ ತಾತ್ಕಾಲಿಕ ಶೆಡ್‌ಗಳು / ಮನೆಗಳು ನಿರ್ಮಾಣಗೊಂಡಿರುತ್ತವೆ. ಈ ಪ್ರದೇಶವು ಸೇರಿದಂತೆ ಮೇಲಿನ ಎಲ್ಲಾ ವಸತಿ ಪ್ರದೇಶಗಳಿಂದ ವ್ಯಾಪಕವಾಗಿ ಕೊಳಚೆ ನೀರು ಹರಿದು ಸದರಿ ಕೆರೆಯನ್ನು ಸೇರುತ್ತಿರುತ್ತದೆ.*

*ಕೆರೆಯನ್ನು ಕೊಳಚೆ ನೀರಿನಿಂದ ಮುಕ್ತಿಗೊಳಿಸಿ ಸಂರಕ್ಷಿಸಬೇಕಾದಲ್ಲಿ ಹಲವು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕಾಗಿದ್ದು, ಕೆರೆಯ ಒಟ್ಟು ವಿಸ್ತೀರ್ಣದಲ್ಲಿ 5 ಎಕರೆ 1 ಗುಂಟೆ ಅತಿಕ್ರಮಣವಾಗಿದ್ದು, ವಿಶೇಷ ಆಯುಕ್ತರು ಅತಿಕ್ರಮಣಗೊಂಡಿರುವ ಪ್ರದೇಶವನ್ನು ಗುರುತಿಸಲು ಸರ್ವೆ ಮಾಡಿಸಿ, ಅನಧಿಕೃತ ಒತ್ತುವರಿಯನ್ನು ಕೂಡಲೇ ತೆರವುಗೊಳಿಸಲು ಕ್ರಮ ಕೈಗೊಳ್ಳುವುದು, ತದನಂತರ, ಕೆರೆಯ ಅಭಿವೃದ್ಧಿ ಕೆಲಸವನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿ ನಂತರ ಅನಧಿಕೃತ ಒತ್ತುವರಿಯನ್ನು*

*. . . . ಮುಂದುವರೆದಿದೆ.*

*ತೆರವುಗೊಳಿಸುವ ಕೆಲಸಗಳ ಜೊತೆಗೆ ಕೆರೆಯ ಚೈನ್‌ಲಿಂಕ್ ತಂತಿಬೇಲಿಯನ್ನು ಸಹ ಕೈಗೊಳ್ಳಲು ಅನುಮೋದಿಸಿರುತ್ತಾರೆ ಹಾಗೂ ಈ ಕ್ರಮದಿಂದ ಇನ್ನು ಮುಂದೆ ಆಗಬಹುದಾದ ಒತ್ತುವರಿಯನ್ನು ತಡೆಗಟ್ಟಬಹುದಾಗಿದೆ ಎಂದು ಸೂಚಿಸಿರುತ್ತಾರೆ.*

*ಸದರಿ ಕೆರೆಯನ್ನು ಪ್ರಸಕ್ತ ಪರಿಸ್ಥಿತಿಯಲ್ಲಿ ಅಭಿವೃದ್ಧಿಗೊಳಸಬೇಕಾದರೆ ಮೊದಲನೆಯದಾಗಿ ಅತಿಕ್ರಮಣ ಪ್ರದೇಶದಿಂದ ಬರುವ ಕೊಳಚೆ ನೀರನ್ನು 900 ಎಂ.ಎಂ. ಡಯಾ ಪೈಪ್ ಮತ್ತು 1.5 ಮೀ. ಅಗಲದ ಎಸ್.ಎಸ್.ಎಂ. ಡ್ರೈನ್ ನಿರ್ಮಾಣ, ಅತಿಕ್ರಮಣಗಳನ್ನು ನಿಯಂತ್ರಣಗೊಳಿಸಲು ತಂತಿಬೇಲಿ ಕೆರೆಯಲ್ಲಿ ಹೂಳು ತೆಗೆಯುವುದು, ಏರಿ ಬಲಪಡಿಸುವುದು, ಸುತ್ತಲೂ ವಾಕಿಂಗ್ ಟ್ರ್ಯಾಕ್ ನಿರ್ಮಾಣ, ಸುಮಾರು ಅರ್ಧ ಎಕರೆ ಪ್ರದೇಶದಲ್ಲಿ ವೆಟ್ ಲ್ಯಾಂಡ್ ಮತ್ತು ವಾಕಿಂಗ್ ಟ್ರ್ಯಾಕ್ ಸುತ್ತಲೂ ಗಿಡ ಉದ್ಯಾನವನ ನಿರ್ಮಿಸಬೇಕಾಗಿರುತ್ತದೆ. ಈ ಎಲ್ಲಾ ಕೆಲಸಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಒಟ್ಟು ರೂ.200.00ಲಕ್ಷಗಳ ಅನುದಾನ ಅವಶ್ಯಕತೆ ಇರುತ್ತದೆ. ವಿಜಿನಾಪುರ ಕೆರೆ (ಕೌದೇನಹಳ್ಳಿ ಸರ್ವೆ ನಂ.85) ಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ ಅನುಮೋದನೆ ನೀಡಲು* ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 12–07–2011 ರ ಟಿಪ್ಪಣಿ.

**ನಿರ್ಣಯ:–** **ಮಾನ್ಯ ಆಯುಕ್ತರ ದಿನಾಂಕ:12–07–2011ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕೆರೆಯ ಕಾಮಗಾರಿಯ ಬಗ್ಗೆ ಸಮಿತಿಯು ತಪಾಸಣೆ ಮಾಡಲಾಗಿದ್ದು, ಸಾರ್ವಜನಿಕರು ಕಸ–ಕಡ್ಡಿ ಮತ್ತು ಹೂಳನ್ನು ಹಾಕಿ ಒತ್ತುವರಿ ಮಾಡಿಕೊಳ್ಳುವ ಸಂಭವವಿರುವುದಿಂದ, ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ವಿಳಂಬವಾಗುವ ಪ್ರಯುಕ್ತ, ಕೂಡಲೇ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೆತ್ತಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸಮಿತಿಯು ತೀರ್ಮಾನಿಸಿತು.**

**2. ವಿಷಯ ಸಂಖ್ಯೆ:ತೋ/ಸ್ಥಾ/ಸ/16/11–12, ದಿನಾಂಕ:30–07–2011**

ಗೋವಿಂದರಾಜನಗರ ಕ್ಷೇತ್ರದ ವಾರ್ಡ್ ಸಂಖ್ಯೆ.128ರ ಸಿದ್ದಗಂಗಾ ಶಾಲೆಯ ಮುಂಭಾಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಖಾಲಿ ನಿವೇಶನವಿರುತ್ತದೆ. ಈ ನಿವೇಶನದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ, ಸ್ಥಳೀಯ ಸಾರ್ವಜನಿಕರು ಹಲವಾರು ದೂರುಗಳನ್ನು ನೀಡಿರುತ್ತಾರೆ ಮತ್ತು ಖಾಲಿ ಇರುವ ನಿವೇಶನವನ್ನು ಕಿಡಿಗೇಡಿಗಳು ಅತಿಕ್ರಮಣ ಮಾಡುವ ಸಂಭವವಿರುತ್ತದೆ. ಆದ್ದರಿಂದ, ಸದರಿ ನಿವೇಶನದ ಸಂರಕ್ಷಣೆ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.81.81 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸ್ಥಾಯಿ ಸಮಿತಿ ಅನುಮೋದನೆಯನ್ನು ನಿರೀಕ್ಷಿಸಿ ಕಾಮಗಾರಿಗೆ ಜಾಬ್ ಕೋಡ್ ನೀಡಲಾಗಿರುತ್ತದೆ.

ಮೇಲ್ಕಂಡ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಪಡೆದು ಕಾಮಗಾರಿಯು ತುರ್ತಾದುದರಿಂದ, ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯವರಿಗೆ ವಹಿಸಿ, ಕಾಮಗಾರಿಯನ್ನು ಪ್ರಾರಂಭಿಸಿ, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

*. . . . ಮುಂದುವರೆದಿದೆ.*

ಸ್ಥಾಯಿ ಸಮಿತಿ ಅನುಮೋದನೆಯನ್ನು ನಿರೀಕ್ಷಿಸಿ ಕೈಗೊಂಡಿರುವ ಕಾಮಗಾರಿಗೆ ಘಟನ್ನೋತ್ತರ ಮಂಜೂರಾತಿ ಪಡೆಯಲು, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 28–07–2011 ರ ಟಿಪ್ಪಣಿ.

**<u>ನಿರ್ಣಯ</u>** :–ದಿನಾಂಕ:28–07–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

ಕೊನೆಯದಾಗಿ, ಈ ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು :–</u>**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ವಲಯ ಅಪರ/ ಜಂಟಿ ಆಯುಕ್ತರು (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ / ಮಹದೇವಪುರ) ರವರಿಗೆ *ಕಳುಹಿಸಿದೆ.*
- *ಕಛೇರಿ ಪ್ರತಿ.*